**ಓಎಸ್ ನಂಃ 243/2017 ಪಿ.ಡಬ್ಲ್ಯೂ- 6**

**ದಿನಾಂಕಃ 04.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದ ಃ**

ನೀವು ಮಹಾರಾಷ್ಟ್ರದಿಂದ ಬೆಂಗಳೂರಿಗೆ ಯಾವ ಇಸವಿಯಲ್ಲಿ ಬಂದಿರುತ್ತೀರಿ ಎಂದರೆ ಸಾಕ್ಷಿ **2000** ಇಸವಿಯಲ್ಲಿ ಬಂದಿರುತ್ತೆನೆ. ಬೆಂಗಳೂರಿಗೆ ಬಂದ ಮೆಲೆ ಯಾರ ಜೊತೆಗೆ ವಾಸವಿದ್ದೀರಿ ಎಂದರೆ ನಾನು ಮತ್ತು ನನ್ನ ಯಜಮಾನರು ಲತಾ ಮತ್ತು ರೇಖಾ ಜೊತೆ ವಾಸವಿದ್ದೆ ಎನ್ನುತ್ತಾರೆ. **2010** ರಿಂದ ಈಚೆಗೆ ಪಾರ್ವತಮ್ಮ ರವರು ನಿಮ್ಮನುನ ಬೇಟಿಯಾಗಿರುತ್ತಾರಾ ಎಂದರೆ ಬೇಟಿಯಾಗಿರುತ್ತಾರೆ ಎನ್ನುತ್ತಾರೆ. ಕೊನೆಯ ಬಾರಿ ಸದರಿ ಪಾರ್ವತಮ್ಮ ನಿಮ್ಮ ಅಕ್ಕ ಯಾವಾಗ ಬೇಟಿಯಾಗಿರುತ್ತಾರೆ ಎಂದರೆ ಸಾಕ್ಷಿ ಅಲಿಂದ ಬಂದ ಮೆಲೇ ಆವಾಗ ಆವಾಗ ಬೇಟಿ ಆಗಿರುತ್ತೇನೆ ಎನ್ನುತ್ತಾರೆ. **24.06.2011** ರಲ್ಲಿ ಸದರಿ ನಿಮ್ಮ ಅಕ್ಕ ನಿಮ್ಮ **3** ಜನ ಮಕ್ಕಳಿಗೆ ಮತ್ತು ವಾದಿ ಮತ್ತು ಪ್ರತಿವಾದಿಯ ಮಗಳು ಇವರುಗಳಿಗೆ ವಿಲ್ ಬರೆದಿರುತ್ತಾರಾ ಎಂದರೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ನಿಮ್ಮ ಅಕ್ಕ ವಿಲ್ ಬಗ್ಗೆ ಹೇಳಿರುತ್ತಾರಾ ಎಂದರೆ ಇಲ್ಲ ಎನ್ನುತ್ತಾರೆ. **19.05.2012** ರಲ್ಲಿ ಸದರಿ ವಿಲ್ ಅಂದರೇ ದಿಃ **24.06.2011** ವಿಲ್ ರದ್ದಾಗಿದ್ದ ಬಗ್ಗೆ ಹೇಳಿರುತ್ತಾರಾ ಎಂದರೆ ಹೇಳಿಲ್ಲ ಎನ್ನುತ್ತಾರೆ. ಸದರಿ ವಿಲ್ ರದ್ದಾಯತಿ ಪತ್ರ ನೋಡಿರುತ್ತೀರಾ ಎಂದರೆ ನೋಡಿಲ್ಲ ಎನ್ನುತ್ತಾರೆ. ದಿ: **19.05.2012** ಏನೇನು ಪತ್ರ ನೋಡಿರುತ್ತೀರಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಅಕ್ಕ ಪಾರ್ವತಮ್ಮ ಯಾವ ಯಾವ ಪತ್ರ ನೋಂದಣಿ ಮಾಡಿಸಿರುತ್ತಾರೆ ಎಂದರೆ ತಿಳಿದುಕೊಂಡಿರುತ್ತಿರಾ ಎಂದರೆ ನಾನು ವಾದಿ ಮನೆಗೆ ಹೋದಾಗ ನನ್ನ ಅಕ್ಕ ಅಲ್ಲಿಯೇ ಇದ್ದರು ನನ್ನ ಅಳಿಯ ಅಲ್ಲಿಯೇ ಇದ್ದರು ಸಮ್ಮುಖದಲ್ಲಿ ಪತ್ರವನ್ನು ಬರೆಸಿರುತ್ತೆನೆ ಎಂದು ಹೇಳಿರುತ್ತಾರೆ

ವಾದಿನಯಮನೆಯಲ್ಲಿ ಹೇಳಿದ ಪತ್ರವನ್ನು ಬಿಟ್ಟು ನಿಮ್ಮ ಅಕ್ಕ ಯವಾ ಪತ್ರವನ್ನು ಬರೆಸಿರುತ್ತಾರೆ ಎಂದು ಗೊತ್ತಾ ಎಂದರೆ ಸಾಕಿಃ ಸಬ್ ರಿಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಹೋಗಿ ನನಗೆ ಹುಷಾರಿರರಿಲ್ಲ ನನ್ನಿಂದ ಸಹಿ ಪಡೆದಿರುತ್ತಾರೆ ವಾದಿಯ ಮನೆಗೆ ಹೋದಾಗ ಸದರಿ ನಿಮ್ಮ ಅಕ್ಕ ಪಾರ್ವತಮ್ಮ ರವರ ದೈಹಿಕ ಆರೋಗ್ಯ ಹೇಗಿತ್ತು ಎಂದರೆ ಚೆನ್ನಾಗಿದ್ದರು ಎನ್ನುತ್ತಾರೆ. ಆ ನಂತರ ಎಷ್ಟು ದಿವಸ ನಿಮ್ಮ ಅಕ್ಕ ಬದುಕಿದ್ದರು ಎಂದರೆ ಸೆಪ್ಟೆಂಬರ್ **2012** ರಲ್ಲಿ ತೀರಿಕೊಂಡಿರುತ್ತಾರೆ. ವಾದಿಯ ಮನೆಯಲ್ಲಿ ನೋಡಿದ ಎಷುಎ್ಟ ದಿವಸದ ನಂತರ ತೀರಿಕೊಂಡಿರುತ್ತಾರೇ ಎಂದರೆ ನನಗೆ ಜ್ಞಾಪಕ ಇರುವುದಿಲ್ಲ ಎನ್ನುತ್ತಾರೆ. ವಾದಿಯ ಮನೆಯಲ್ಲಿ ಬರೆದಿರುವ ಪತ್ರನು ನೋಡಿರುತ್ರೀರಾ ಎಂದರೆ ಯಾರು ಬರೆದಿರುತ್ತಾರೆ ಎಂದು ನನಗೆ ಗೋತ್ತಿಲ್ಲ ಎನ್ನುತ್ತಾರೆ. ವಾದಿಯ ಮನೆಯಲ್ಲಿ ಬರೆದಿರುವ ಪತ್ರಕೇ ನೀವು ಸಹಿ ಹಾಕಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಪತ್ರಕ್ಕೆ ನಿಮ್ಮ ಸಮ್ಮುಖದಲ್ಲಿ ಸಹಿ ಮಾಡಿರುತ್ತಾರಾ ಎಂದರೆ ನಾನು ಒಳಗಡೆ ಇದ್ದೆ ಎನ್ನುತ್ತಾರೆ. ಆ ನಂತರ ಸದರಿ ವಾದಿಯ ಮನೆಯಲ್ಲಿ ಬರೆದ ಪತ್ರದಲ್ಲಿ ತಿಳಿದುಕೊಂಡಿರುತ್ತೀರಾ ಎಂದರೆ ಅಕ್ಕ ಹೇಳಿರುತ್ತಾರೆ ಎನ್ನುತ್ತಾರೆ. ಸದರಿ ಪಾರ್ವತಮ್ಮ ರವರ ಸಹಿಯನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ನಿಡಿ **1** ರಲ್ಲಿಯ ಸಹಿಯನ್ನು ಗುರುತಿಸಲು ಸಾಧ್ಯವಿಲ್ಲ ಎನ್ನುತಾರೆ. ಪಾರ್ವತಮ್ಮ ರವರು ದಿಃ **19.05.2012** ರಲ್ಲಿ ಮಾಡಿದ ಪತ್ರಗಳನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಡಿಕೊಂಡು ಬಂದೆ ಹೇಳಿರುವುದು ಯವಾಗ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸದರಿ **19.05.2012** ರಲ್ಲಿ **3** ಪತ್ರಗಳು ಆಗಿರುತ್ತವೆ ಅಲ್ಲಿ ಯಾವ ಪತ್ರವನ್ನು ಮೋಸ ಮಾಡಿ ಬರೆಸಿಕೊಂಡಿರುತ್ತಾರೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮೇಸ ಆಗಿರುತ್ತದೆ ಎಂದು ಅವರು ತಿೀರಿಕೊಳ್ಳು ಎಷ್ರು ತಿಂಗಳ ಮುಂಚೆ ಹೇಳಿರುತ್ತಾರೇ ಎಂದರೆ ಸಾಕ್ಷಿ **3-4** ತಿಂಗಳ ಮುಂಚೆ ಹೇಳಿರುತ್ತಾರೆ

ಎನ್ನುತ್ತಾರೆ. ಪಾರ್ವತಮ್ಮ ರವರ ಯಜಮಾನರು ಸಬ್ ರಿಜಿಸ್ಟ್ರಾರ್ ಕಚೇರಿಯಲಿ ಕೆಲಸ ಮಾಡುತ್ತಿದರು ಎಂದರೆ ಹೌದು ಎನ್ನುತ್ತರೆ. ದಿಃ **19.05.2012** ರಲ್ಲಿ ಆಗಿರುವ ಪತ್ರವನ್ನು ಇದುವರೆಗೂ ನೀವು ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ ದಿಃ **19.05.2012** ಆಗಿರುವ ಪತ್ರಗಳ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿಯ ಮನೆಯಲ್ಲಿ ಯಾವುದೇ ಪತ್ರವನ್ನು ಪಾರ್ವತಮ್ಮ ಬರೆಸಿರುವುದಿಲ್ಲ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ನನಗೆ ಹೇಳಿರುತ್ತಾರೆ ಎನ್ನುತ್ತಾರೆ. ವಾದಿ, ಪ್ರಸಾದ, ಅಭಿನಂದನ್, ಮಂಜುನಾಥ ಇವರುಗಳು ಸಬ್ ರಿಜಿಸ್ಟ್ರಾರ್ ಅಧಿಕಾರಿ ಮುಂದೆ ಹೇಳಿಕೆ ಕೊಟ್ಟಿರುವುದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಮಂಜುನಾಥ ಮತ್ತು ಅಭಿನಂದನ್ ಗೊತ್ತಾ ಎಂದರೆ ನೋಡಿರುತ್ತೆನೆ ಅಷ್ಟಾಗಿ ಗೊತ್ತಿಲ್ಲ ಎನ್ನುತ್ತಾರೆ. **1** ನೇ ಪ್ರತಿವಾದಿ ಪಾರ್ವತಮ್ಮ ರವರಿಗೆ ತಮ್ಮ ಎಂದರೆ ಹೌದು ಎನ್ನುತ್ತಾರೆ. ಪಾರ್ವತಮ್ಮ ಗಂಡ ಶ್ರೀನಿವಾಸ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ **2009** ರಲ್ಲಿ ಎನ್ನುತ್ತಾರೆ. ಸದರಿ ಶ್ರೀನಿವಾಸ ಖಾಯಿಲೆ ಆಗಿ ಎಷ್ಟ ವರ್ಷ ಇದ್ದರು ಎಂದರೆ ಸಾಕ್ಷಿ **2-3** ವರ್ಷ ಆಸ್ಪತ್ರೆಯಲ್ಲಿ ಪಡೆಯುತ್ತಿದ್ದರು ಎನ್ನುತ್ತಾರೆ. ಸದರಿ ಪಾರ್ವತಮ್ಮ ಆಕೆಯ ಗಂಡನಿಗೆ ಎಷ್ಟ ಲಕ್ಷ ಖರ್ಚು ಮಾಡಿರುತ್ತಾರೆ ಎಂದು ಗೊತ್ತಾ ಎಂದರೆ ಲಕ್ಷಗಳು ಖರ್ಚು ಮಾಡಿರುತ್ತಾರೆ ಆದರೆ ಗೊತ್ತಿಲ್ಲ ಎನ್ನುತ್ತಾರೆ. ಅವರ ಆಸ್ಪತ್ರೆ ಖರ್ಚಿಗೆ ಎಂದು ವೆಂಕಟಾಚಲಪತಿ ಮತ್ತು ಸಾಯಿಬಾಬಾ ರವರಿಗೆ **23.01.2010** ರಲ್ಲಿ ಎಂದು ಕ್ರಯದ ಕರಾರು ಪತ್ರ **8** ಲಕ್ಷಕ್ಕೆ ಮಾಡಿಕೊಟ್ಟಿರುತ್ತಾರೆ ಎಂದರೆ ತೆಗೆದುಕೊಂಡಿರುವುದಿಲ್ಲ ಅವರಿಗೆ ಅವಶಕತೆ ಇರುವುದಿಲ್ಲ ಎನ್ನುತ್ತಾರೆ. ಸದರಿ ಶ್ರೀನಿವಾಸ ರವರಿಗೆ ಆರೋಗ್ಯ ಚಿಕಿತ್ತೆಗೆಂದು ಮಾಡಿದ ಖರ್ಚಿಗೊಸ್ಕರ ಕ್ರಯಕ ಕರಾರು ಮಾಡಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು ಎನ್ನುತ್ತಾರೆ. ನಂತರ **19.05.2012** ರಲ್ಲಿ

ಸದರಿ ಕ್ರಯದ ಕರಾರು ಪತ್ರವನ್ನು **9** ಲಕ್ಷ **98** ಸಾವಿರ ಕೊಟ್ಟು ರದ್ದು ಮಾಡಿಸಿರುತ್ತಾರೆ ಎಂದರೆ ಸುಳ್ಳು ಎನ್ನುತ್ತಾರೆ. ಪಾರ್ವತಮ್ಮ ಆಕೆಯ ಗಂಡನಿಗೆ ವಾದಿ ದತ್ತು ಮಗಳು ಅಲ್ಲ ಎಂದರೆ ಸುಳ್ಳು ಎನ್ನುತ್ತಾರೆ. ದಾವಾ ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ **22.08.2012** ರ ವಿಲ್ ಅಂತಾ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಲ್ ಗೆ ಪಾರ್ವತಮ್ಮ ರುಜು ಹಾಕಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಹಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.